ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಮತ್ತು ಆ) ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಬಾಗೇವಾಡಿ ಗ್ರಾಮದಲ್ಲಿ 33 ಕೆ ವಿ ಸ್ಟೇಷನ್ ಮಂಜೂರಾಗಿರುವುದಿಲ್ಲ ಆದರೆ ಇದೇ ತಾಲ್ಲೂಕಿನ ಡೋಣಿ ಗ್ರಾಮದಲ್ಲಿ 33 ಕೆ ವಿ ಸ್ಟೇಷನ್ ಸ್ಥಾಪನೆಯ ಪ್ರಸ್ತಾವನೆಗೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ತಾಂತ್ರಿಕ ಸಮಿತಿಯು ಜನವರಿ 99ರಲ್ಲಿ ಅನುಮೋದನೆ ನೀಡಿತ್ತು ಆದರೆ ಇದೇ ತಾಲ್ಲೂಕಿನ ಡಂಬಳ ಗ್ರಾಮದಲ್ಲಿ ಒಂದು 1x10 ಎಂ ವಿ ಎ 110/11 ಕೆ ವಿ 1x10 ಎಂ ವಿ ಎ 110/33 ಕೆ ವಿ ವಿದ್ಯುತ್ ಸಬ್ – ಸ್ಟೇಷನ್‌ನ್ನು ನಿರ್ಮಿಸುವ ಕಾರ್ಯವು ಪ್ರಗತಿಯಲ್ಲಿದೆ ಡೋಣಿ ಗ್ರಾಮವು ಡಂಬಳದಿಂದ ಕೇವಲ 6 ಕಿ ಮೀ ದೂರದಲ್ಲಿದ್ದು, ಡಂಬಳದಲ್ಲಿ ಸಬ್–ಸ್ಟೇಷನ್ ಚಾಲನೆಗೊಂಡ ನಂತರ ಡೋಣಿ ಗ್ರಾಮದ ಸುತ್ತ – ಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆ ಉಂಟಾಗುವುದರಿಂದ, ಡೋಣಿ ಗ್ರಾಮದಲ್ಲಿ 33 ಕೆ ವಿ ವಿದ್ಯುತ್ ಸಬ್ ಸ್ಟೇಷನ್ ಸ್ಥಾಪನೆಯ ಪ್ರಸ್ತಾವನೆಯನ್ನು ಈಗ ಕೈ ಬಿಡಲಾಗಿದೆ

ಮುಂಡರಗಿ ಹಾಗೂ ಡಂಬಳದಲ್ಲಿ 110 ಕೆ ವಿ ಸ್ಟೇಷನ್ ಪ್ರಾರಂಭಿಸುವ ಬಗ್ಗೆ

63 (282) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ಮುಂಡರಗಿ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗದಗ ಜಿಲ್ಲೆಯ ಮುಂಡರಗಿ ಹಾಗೂ ಡಂಬಳದಲ್ಲಿ 110 ಕೆ ವಿ ಸ್ಟೇಷನ್‌ಗೆ ಅಡಿಗಲ್ಲು ಹಾಕಿ ಎಷ್ಟು ವರ್ಷಗಳಾದವು

ಆ) ಸದರಿ ಸಬ್–ಸ್ಟೇಷನ್‌ಗಳು ಎಂದಿನಿಂದ ಪ್ರಾರಂಭವಾಗುತ್ತವೆ?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ಗದಗ ಜಿಲ್ಲೆಯಿ ಮುಂಡರಗಿ ಮತ್ತು ಡಂಬಳಗಳಲ್ಲಿ 110 ಕೆ ವಿ ವಿದ್ಯುತ್ ಸಬ್ – ಸ್ಟೇಷನ್‌ಗಳ ಸ್ಥಾಪನೆಗೆ ಅನುಕ್ರಮವಾಗಿ ಮೇ 1998 ಮತ್ತು ಏಪ್ರಿಲ್ 1999 ರಲ್ಲಿ ಅಡಿಗಲ್ಲನ್ನು ಹಾಕಲಾಗಿರುತ್ತದೆ

ಆ) ಸದರಿ ವಿದ್ಯುತ್ ಸಬ್–ಸ್ಟೇಷನ್‌ಗಳ ನಿರ್ಮಾಣ ಕಾರ್ಯಗಳು ಪ್ರಗತಿಯಲ್ಲಿದ್ದು, ಫೆಬ್ರವರಿ 2004ರ ಅಂತ್ಯದೊಳಗೆ ನಿರ್ಮಾಣ ಕಾರ್ಯಗಳು ಪೂರ್ಣಗೊಂಡು ಕಾರ್ಯಾರಂಭಗೊಳ್ಳುವ ನಿರೀಕ್ಷೆ ಇರುತ್ತದೆ

ಬೆಳ್ತಂಗಡಿ ವ್ಯಾಪ್ತಿಯಲ್ಲಿ ಸಣ್ಣ ನೀರಾವರಿ ಕಾಮಗಾರಿಗಳ ಬಗ್ಗೆ

64 (197) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಗೃಹ ಮತ್ತು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ವ್ಯಾಪ್ತಿಯಲ್ಲಿ ಇದುವರೆಗೆ ಎಷ್ಟು ಸಣ್ಣ ನೀರಾವರಿ ಇಲಾಖೆಯ ವೆಂಟೆಡ್ ಡ್ಯಾಮ್ (ಕಿಂಡಿ ಅಣೆಕಟ್ಟು) ಗಳನ್ನು ನಿರ್ಮಿಸಲಾಗಿದೆ ವಿವರ ನೀಡುವುದು

ಆ) ಇವುಗಳ ನಿರ್ವಹಣೆಗೆ ಹಾಗೂ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುತ್ತದಯೇ ಇದಕ್ಕಾಗಿ ಕಳೆದ 4 ವರ್ಷಗಳಿಂದ ಖರ್ಚು ಮಾಡಿರುವ ಮೊತ್ತವೆಷ್ಟು ಮತ್ತು ಯಾವ ಯಾವ ಕಿಂಡಿ ಅಣೆಕಟ್ಟುಗಳ ದುರಸ್ತಿಗಾಗಿ ವೆಚ್ಚ ಮಾಡಲಾಗಿದೆ

ಇ) ಅದೇ ರೀತಿ ಗಿಳಿ ಕಾಪು ಎಂಬಲ್ಲಿ ಪಲ್ಗುಣಿ ನದಿಗೆ ವೆಂಟೆಡ್ ಡ್ಯಾಮ್ ಬ್ಯಾರೇಜ್ ಸಮೇತ ನಿರ್ಮಾಣ ಮಾಡುವ ಪ್ರಸ್ತಾಪ ಸರ್ಕಾರದ ಮುಂದಿದೆಯೇ

ಈ) ಈ ತಾಲ್ಲೂಕು ವ್ಯಾಪ್ತಿಯಲ್ಲಿ ರೈತ ಕಾಯಕ ಕೆರೆ ಯೋಜನೆಯಡಿ ಎಷ್ಟು ಕೆರೆಗಳನ್ನು ಅಭಿವೃದ್ಧಿಗೊಳಿಸಲಾಗಿದೆ ವಿವರ ಒದಗಿಸಿ

ಉ) ಈ ನಿಟ್ಟಿನಲ್ಲಿ ಅಂತರ್ಜಲ ಹಚ್ಚಿಸುವ ಬಗ್ಗೆ ಈ ಭಾಗದ ನದಿ ಹೊಳೆಗಳನ್ನು ಉಪಯೋಗಿಸಿ ಡ್ಯಾಂ ನಿರ್ಮಿಸುವ ಯೋಜನೆ ಸರ್ಕಾರಕ್ಕಿದೆಯೇ (ವಿವರ ಒದಗಿಸಿ)

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆ ಬೆಳ್ತಂಗಡಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕಿಂಡಿ ಅಣೆಕಟ್ಟುಗಳ ವಿವರಗಳನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ

ಆ) ಹೌದು

ಅನುಧಾನ ಲಭ್ಯತೆಗನುಗುಣವಾಗಿ ನಿರ್ವಹಣೆ ಹಾಗೂ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುತ್ತಿದೆ ಇದಕ್ಕಾಗಿ ಕಳೆದ ನಾಲ್ಕು ವರ್ಷಗಳಲ್ಲಿ ರೂ 8 87 ಲಕ್ಷ ಮೊತ್ತವನ್ನು ವೆಚ್ಚ ಮಾಡಲಾಗಿದೆ ದುರಸ್ತಿಪಡಿಸಲಾದ ಕಿಂಡಿ ಅಣೆಕಟ್ಟುಗಳ ವಿವರಗಳನ್ನು ಅನುಬಂಧ – 2 ರಲ್ಲಿ ನೀಡಲಾಗಿದೆ

ಇ) ಹೌದು ಇದೆ

ಈ) ಬೆಳ್ತಂಗಡಿ ತಾಲ್ಲೂಕಿನಲ್ಲಿ ರೈತ ಕಾಯಕ ಕೆರೆ ಯೋಜನೆಯಡಿ ಗುರುವಾಯನ ಕೆರೆಯನ್ನು ರೂ 7 00 ಲಕ್ಷ ಅಂದಾಜು ಮೊತ್ತದಲ್ಲಿ ಅಭಿವೃದ್ಧಿಪಡಿಸಲಾಗಿದೆ

ಉ) ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುವ ನದಿಗಳಿಗೆ / ಕೊಳ್ಳಗಳಿಗೆ ಅಡ್ಡಲಾಗಿ 295 00 ಕೋಟಿ ರೂ ಗಳ ವೆಚ್ಚದಲ್ಲಿ ಕಿಂಡಿ ಅಣೆಕಟ್ಟುಗಳನ್ನು ನಿರ್ಮಿಸಲು ಕ್ರಿಯಾ ಯೋಜನೆಯನ್ನು ಅನುಮೋದನೆ ಹಾಗೂ ಧನ ಸಹಾಯಕ್ಕಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಲಾಗಿದೆ ಇದುವರೆವಿಗೂ ಅನುಮೋದನೆ ದೊರೆತಿರುವುದಿಲ್ಲ

ವಿಧಾನ ಸಭೆಯ ಪ್ರಶ್ನೆ ಸಂಖ್ಯೆ 197 ಕ್ಕೆ ಅನುಬಂಧ - 2

ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಿಂಡಿ ಅಣೆಕಟ್ಟುಗಳ ದುರಸ್ತಿಗಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಮಾಡಲಾದ ವೆಚ್ಚದ ವಿವರ

(ರೂ ಲಕ್ಷಗಳಲ್ಲಿ)

ಕ್ರ ಸಂ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	99-2000 ನೇ ಸಾಲಿನ ವೆಚ್ಚ	2000-01 ನೇ ಸಾಲಿನ ವೆಚ್ಚ	2001-02 ನೇ ಸಾಲಿನ ವೆಚ್ಚ	2002-03 ನೇ ಸಾಲಿನ ವೆಚ್ಚ	2003-04 ನೇ ಸಾಲಿನ ವೆಚ್ಚ	ಒಟ್ಟು ವೆಚ್ಚ
1	ಮುಂಡಾಣಿ ಗ್ರಾಮದಲ್ಲಿ ಮಂಡಾಜೆ ಕಿಂಡಿ ಅಣೆಕಟ್ಟುವಿನ ದುರಸ್ತಿ	5 00	3 95	0 97	–	–	–	4 92
2.	ಇಂದಬೆಟ್ಟು ಕಿಂಡ ಅಣೆಕಟ್ಟುವಿನ ದುರಸ್ತಿ	3 00	–	–	–	–	–	–
3	ಮುಂಡಾಜೆ ಕಿಂಡಿ ಅಣೆಕಟ್ಟಿನ ಎಡದಂಡೆ ಕಾಲುವೆ ಅಭಿವೃದ್ಧಿ	2 00	–	–	–	1 83	–	1 83
4	ಮುಂಡಾಜೆ ಕಿಂಡಿ ಅಣೆಕಟ್ಟಿನ ಬಲಕಾಲುವೆ ದುರಸ್ತಿ	2 00	–	–	–	2 12	–	2 12
5	ಇಳಂತಿಲಾ ಕಿಂಡಿ ಅಣೆಕಟ್ಟಿನ ವಾರ್ಷಿಕ ನಿರ್ವಹಣೆ	0 29	–	–	–	–	–	–
	ಒಟ್ಟು							8 87

ವಿಧಾನ ಸಭೆಯ ಪ್ರಶ್ನೆ ಸಂಖ್ಯೆ 197ಕ್ಕೆ ಅನುಬಂಧ – 1

ಬೆಳ್ತಂಗಡಿ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ಬರುವ ಕಿಂಡಿ ಅಣೆಕಟ್ಟುಗಳ ವಿವರ

ಕ್ರಮ ಸಂಖ್ಯೆ	ಕಿಂಡಿ ಅಣೆಕಟ್ಟಿನ ಹೆಸರು	ಅಚ್ಚುಕಟ್ಟು ಹೆ ಗಳಲ್ಲಿ
1	ಮಳವಂತಿಗೆ ಗ್ರಾಮದ ಅಳಿಯಂತರ ಕಟ್ಟೆ	52 80
2.	ಇಂದ ಬೆಟ್ಟು ಗ್ರಾಮದ ಇಂದಬೆಟ್ಟು	42 80
3	ಅಂಡಿಂಜೆ ಗ್ರಾಮದ ಮೂಡುಕೋಡಿ	52 80
4	ಮಿತ್ತಬಾಗಿಲು ಗ್ರಾಮದ ಅನಡ್ಕ ಹಳ್ಳ ಮತ್ತು ನಂದಿಕಾಡು ಹಳ್ಳಕ್ಕೆ ಕಿಂಡಿ ಅಣೆಕಟ್ಟು	52 60
5	ಕಡಿರುದ್ಯಾವರ ಗ್ರಾಮದಲ್ಲಿ ನೇತ್ರಾವತಿ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು	42 03
6	ಮುಂಡಾಜೆ ಗ್ರಾಮದಲ್ಲಿ ಮುಂಡಾಜೆ ಹೊಳೆಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು	63 01
7	ಇಳಂತಿಲ ಎಂಬಲ್ಲಿ ಕಿಂಡಿ ಅಣೆಕಟ್ಟು	40 00
8	ಕಡಿರುದ್ಯಾವರ ಗ್ರಾಮದ ಒಳಂಬ್ರ ಎಂಬಲ್ಲಿ ಬಂಡಾಜೆ ಹೊಳೆಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು	52 61

ಬೆಳ್ತಂಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ ಜಲ ವಿದ್ಯುತ್‌ಗಾರಗಳನ್ನು ಸ್ಥಾಪಿಸುವ ಬಗ್ಗೆ

65 (198) ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕು ಅರಂಗೋಡಿ ಗ್ರಾಮದ ಹನ್ನೆರಡು ಕವಲು ಎಂಬಲ್ಲಿ ಪಲ್ಗುಣಿ ನದಿಗೆ ಹಾಗೂ ಶಿಶಿಲ ಗ್ರಾಮದ ದೇಸೋಡಿ ಎಂಬಲ್ಲಿ ಕಪಿಲಾ ನದಿಗೆ ಅಡ್ಡಲಾಗಿ ಸಣ್ಣ ಅಣೆಕಟ್ಟೆಗಳನ್ನು ನಿರ್ಮಿಸಿ ವಿದ್ಯುತ್ ಸ್ಥಾವರ ಸ್ಥಾಪಿಸಲು ವಿಚಾರ ಸರ್ಕಾರಕ್ಕಿದೆಯೇ

ಆ) ಇದ್ದಲ್ಲಿ ಯಾವ ಖಾಸಗಿ ಸಂಸ್ಥೆಗಳಿಗೆ ಯೋಜನೆ ನೀಡಲಾಗಿದೆ ಇದಕ್ಕೆ ಸರ್ಕಾರದ ಅನುಮತಿ ಇದೆಯೇ

ಇ) ನೇರಿಂಜಾ ಗ್ರಾಮದ ದೊಂಡೋಲಿ ಎಂಬಲ್ಲಿಂಯೂ ಈ ಯೋಜನೆ ಅನುಷ್ಠಾನಗೊಳ್ಳುತ್ತದೆಯೋ

ಈ) ಇದರ ಉದ್ದೇಶ ಯೋಜನೆಯ ಗಾತ್ರ ಇದರ ರೂಪು ರೇಷೆಗಳ ವಿವರ ಒದಗಿಸುವುದು,

ಉ) ಇದರಿಂದ ಆ ಭಾಗದ ನಿವಾಸಿಗಳು ಹಾಗೂ ಪರಿಸರಕ್ಕೆ ಅಡ್ಡಿಯಾಗುತ್ತದೆಂದು ಪ್ರತಿಭಟನೆ ನಡೆಸಿರುವರೇ ಈ ಬಗ್ಗೆ ಯಾವ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಬಸವರಾಜ್ ಪಾಟೀಲ್ (ಇಂಧನ ರಾಜ್ಯ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲ್ಲೂಕಿನಲ್ಲಿಯ ಮನ್ನಿಪಿಟ್ಲು ಎಂಬಲ್ಲಿ ಫಲ್ಗುಣಿ ನದಿಗೆ ಅಡ್ಡಲಾಗಿ ತಿರುವುನಾಲೆ ನಿರ್ಮಿಸಿ 15 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಸ್ಥಾವರ